ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮೇರೆಗೆ ಪ್ರಮಾಣೀಕರಿಸಲಾಯಿತು . ದಿ:21-09-2022

ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ವಿ ಬಿ ವಕೀಲರಿಂದ :

ರೂಪನಗುಡಿ ರಸ್ತೆಯಲ್ಲಿ ನಮ್ಮನು ಹೊಸ ಮನೆ ಇರುತ್ತದೆ ಎಂದರೆ ಸರಿಯಲ್ಲ . ರೂಪನಗುಡಿ ರಸ್ತೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇವೆ . ಚಾಸಾ-12 ಮತ್ತು 13 ರವರು ಹನುಮಾನ್ ನಗರದಲ್ಲಿ ವಾಸವಿರುತ್ತಾರೆ ಎಂದರೆ ಸರಿ . ಮಿಲ್ಲರಪೇಟೆಯಲ್ಲಿ ಟೈಲರಿಂಗ್ ಕೆಲಸ ಮಾಡುತ್ತೇವೆ ಎಂದರೆ ಸರಿ . ಇಸಾಕ್ , ಮಹಮದ್ , ಸಾದಿಕ್, ರುಜ್ವಾನ್ ಇವರು ನನಗೆ ಗೊತ್ತು . ಅವರು ಸಹ ಟೈಲರಿಂದಗ್ ಕೆಲಸ ಮಾಡುತ್ತಾರೆ ಎಂದರೆ ಸರಿ . ಅವರು ಸಹ ನಮ್ಮ ಜೊತೆ ಮೊದಲಿಗೆ ಟೈಲರಿಂಗ್ ಕೆಲಸ ಮಾಡುತ್ತಿದ್ದರು, ಈಗ ಮಾಡುವುದಿಲ್ಲ . ಗಲಾಟೆ ಆಯಿತು ಎಂದು ಹೇಳುವ ದಿನ 35 ಜನ ಬಂದಿದ್ದರು . ಗಲಾಟೆಯೂ ಮನೆಯ ಹೊರಗೆ ಗೇಟ್ ಹತ್ತಿರ ಆಗಿರುತ್ತದೆ . ನಮ್ಮ ಮನೆ ಇರುವ ಮಿಲ್ಲರ್ ಪೇಟೆಯೂ ಚಿಕ್ಕ ಓಣಿ ಆಗಿರುತ್ತದೆ ಎಂದರೆ ಸರಿಯಲ್ಲ . ದೊಡ್ಡ ರಸ್ತೆ ಇರುತ್ತದೆ ಲಾರಿ, ಬಸ್ಸುಗಳು ಹೋಗುವುದಿಲ್ಲ , ಕಾರುಗಳು ಹೋಗುತ್ತವೆ . ನಮ್ಮ ಮೇಲೆ ಹಲ್ಲೆ ಮಾಡಿದಾಗ ತಕ್ಷಣವಾಗಿ ಹಲ್ಲೆ ಮಾಡಿರುತ್ತಾರೆ . 35 ಜನ ನಮ್ಮ ಮೇಲೆ ಒಮ್ಮೆಗೆ ಹಲ್ಲೆ ಮಾಡಿರುವುದಿಲ್ಲ . 35 ಜನ ತಕ್ಷಣ ಹಲ್ಲೆ ಮಾಡಿದಾಗ ಯಾರು ಯಾರು ಏನು ಮತ್ತು ಯಾವ ರೀತಿ ಹಲ್ಲೆ ಮಾಡಿದರು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ . ಆ ಸಮಯದಲ್ಲಿ ನಮ್ಮ ಮನೆಯಲ್ಲಿ ಕರೆಂಟ್ ಇರಲಿಲ್ಲ ಮತ್ತು ನಮ್ಮ ಮನೆಗೆ ಕರೆಂಟ್ ಸಂಪರ್ಕ ಇಲ್ಲ ಎಂದರೆ ಸರಿಯಲ್ಲ .

ನಾವು ಬೆಸ್ತ ಸಮಾಜದವರು ಎಂದರೆ ಸರಿ . ಚಂದ್ರಕಲಾ ಇವರು ಬಲಿಜ ಸಮಾಜದವರು ಎಂದರೆ ಸರಿಯಲ್ಲ . ಮಾರುತಿಯೂ ಚುನಾವಣೆಗೆ ಸ್ಪರ್ಧಿಸಿದ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ಮಾರುತಿ ಯಾರು ಎಂದು ನನಗೆ ಗೊತ್ತು . ಮಾರುತಿಯೂ ಚಂದ್ರಕಲಾ ಇವರ ಸಂಬಂದಿಕ ಎನ್ನುವುದು ನನಗೆ ಗೊತ್ತಿಲ್ಲ . ಮಾರುತಿ ಮತ್ತು ಚಾಸಾ-13 ರವರು ಸ್ನೇಹಿತರು ಎಂದರೆ ಸರಿ . ಇಬ್ರಾಹಿಂ ಬಾಬು ಮಾರುತಿ ವಿರುದ್ದ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ, ಮಾರುತಿಗೆ ನಾವೆಲ್ಲ ಬೆಂಬಲ ನೀಡಿದ್ದೆವು ಆದರೆ ಮಾರುತಿಯೂ ಇಬ್ರಾಹಿಂಬಾಬು ವಿರುದ್ಧ ಸೋತನು ಎಂದರೆ ನನಗೆ ಗೊತ್ತಿಲ್ಲ . ಮಾರುತಿಯೂ ಆರೋಪಿತರ ಮೇಲೆ ದ್ವೇಷ ಸಾದಿಸುತ್ತಿರುವುದರಿಂದ ನಮ್ಮ ಮೂಲಕ ಆರೋಪಿತರ ಮೇಲೆ ಈ ಸುಳ್ಳು ಪ್ರಕರಣ ದಾಖಲಿಸಿದ್ದಾನೆ ಎಂದರೆ ಸರಿಯಲ್ಲ .

ದಿಃ **01-12-2021** ರಂದು ನಮ್ಮ ಮನೆಗೆ ಆರೋಪಿತರೆಲ್ಲಾ ಸೇರಿಕೊಂಡು ರಾಃ **8-00** ಗಂಟೆಗೆ ಬಂದರು , ಆ ಸಮಯದಲ್ಲಿ ನಾನು ನನ್ನ ಗಂಡ , ನನ್ನ ಮೂರು ಜನ ಮಕ್ಕಳು ಮತ್ತು ನನ್ನ ಮೈದುನನ ಹೆಂಡತಿ ಮನೆಯಲ್ಲಿ ಇದ್ದೆವು , ಮಕ್ ಬುಲ್ ಇತನು ನನ್ನ ಗಂಡನಿಗೆ ಕೈಯಲ್ಲಿ ಕತ್ತಿಯಂತ ಆಯುದವನ್ನು ಹಿಡಿದುಕೊಂಡು ಹೊಡೆಯಲು ಹೋದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆಗ ನನ್ನ ಮಗ ಮತ್ತು ನಾವೆಲ್ಲಾ ಅಡ್ಡ ಹೋದಾಗ ನನ್ನ ಮಗ ಅಜಯ್ ಕುಮಾರನ ಕೈಗೆ ಕತ್ತಿಯಿಂದ ಗಾಯವಾಯಿತು , ನಂತರ ಕತ್ತಿಯಿಂದ ನನಗೂ ಸಹ ಬಲಗೈ ನಡುಬೆರಳಿಗೆ ಗಾಯವಾಯಿತು, ನನ್ನ ಗಂಡನಿಗೆ ಎಡಗೈಗೆ ಗಾಯವಾಯಿತು , ನನ್ನ ಮಗ ವಿಜಯ್ ಕುಮಾರನಿಗೆ ಮುಷ್ಟಿಯಿಂದ ಒಬ್ಬ ಆರೋಪಿಯೂ ಮೂಗಿಗೆ ಗುದ್ದಿದನು, ನನ್ನ ಮಗ ಆದಿನಾರಾಯಣ ಮತ್ತು ನನ್ನ ಮೈದುನನ ಹೆಂಡತಿಯ ಮೇಲೆ ಹಲ್ಲೆ ಮಾಡಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಗಂಡನಿಗೆ ಮಕ್ ಬುಲ್ ಈತನು ಮಚ್ಚು ಗತ್ತಿಯಿಂದ ಎಡಗೈಗೆ ಹೊಡೆದು ಗಾಯಪಡಿಸಿದನು ಎನ್ನುವ ವಿಷಯವನ್ನು ನನ್ನ ಹೇಳಿಕೆಯಲ್ಲಾಗಲಿ ಅಥವಾ ನಿಪಿ-**3** ರಲ್ಲಾಗಲಿ ಬರೆಸಿಲ್ಲ ಎಂದರೆ ಸರಿಯಲ್ಲ . ನನ್ನ ಗಂಡ ನಮ್ಮ ಮನೆಯ ಎದುರುಗಡೆ ಇರುವ ಮಕ್ ಬುಲ್ ಇತನು ನನ್ನ ಟ್ರ್ಯಾಕ್ಟರ್ ಲಾರಿಗಳನ್ನು ತಡೆಯುತ್ತೀಯ ಎಂದು ಹೆದಿರಿಸುತ್ತಾನೆ ಎಂದು ನನಗೆ ತಿಳಿಸಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಪೊಲೀಸರು ಮು.ಮಾ-**1** ರಿಂದ **6** ರ ವಸ್ತು ಗಳನ್ನು ಪೊಲೀಸರು ನನಗೆ ಪೊ. ಠಾಣೆಯಲ್ಲಿ ತೋರಿಸಿಲ್ಲ ಎಂದರೆ ಸರಿ . ಮು.ಮಾ-**1** ರಿಂದ **6** ರನ್ನು ನಾನು ನ್ಯಾಯಾಲಯದಲ್ಲಿ ನೋಡಿರುತ್ತೇನೆ ಮತ್ತು ಘಟನೆಯ ದಿನ ಮನೆಯಲ್ಲಿ ನೋಡಿರುತ್ತೇನೆ . ಮು.ಮಾ-**1** ರಿಂದ **6** ರಂತಹ ವಸ್ತುಗಳು ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ದೊರೆಯುತ್ತವೆ ಎಂದರೆ ಸರಿ . ಮು.ಮಾ-**1** ರಿಂದ **6** ರ ಮೇಲೆ ವಿಶೇಷವಾದ ಗುರುತುಗಳು ಇಲ್ಲ ಎಂದರೆ ಸರಿ . ಮು.ಮಾ-**1** ರಿಂದ **6** ರ ವಸ್ತುಗಳನ್ನು ಆರೋಪಿತರು ಬಳಸಿಲ್ಲ ಮತ್ತು ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ . ಪೊಲೀಸರ ಮಾತು ಕೇಳಿ ಆರೋಪಿತರನ್ನು ಮತ್ತು ಮುದ್ದೆಮಾಲುಗಳನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಗುರುತಿಸುತ್ತೇನೆ ಎಂದರೆ ಸರಿಯಲ್ಲ . ಆರೋಪಿತರು ಯಾರು ನಮ್ಮ ಮನೆಗ ಬಂದು ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ . ನಾನು ಘಟನೆಯ ದಿನ ಮನೆಯಲ್ಲಿ ಇರಲಿಲ್ಲ , ನನಗೆ ಯಾವುದೇ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ . ನನ್ನ ಗಂಡನ ಪ್ರಭಾವದಿಂದ ಹಾಗೂ ಮೇಲಾಧಿಕಾರಿಗಳ ಪ್ರಭಾವದಿಂದ

ಆಸ್ಪತ್ರೆಗೆ ದಾಖಲಾಗಿದ್ದೆನು ಎಂದರೆ ಸರಿಯಲ್ಲ . ನನ್ನ ದೊಡ್ಡ ಮಗ ಅಜಯ್ಯ ಕುಮಾರ್ ಬಿ . ಕಾಂ ಓದುತ್ತಿದ್ದು , 2 ನೇ ಮಗ 2 ನೇ ಪಿಯುಸಿ ಯಲ್ಲಿ ಓದುತ್ತಿದ್ದಾನೆ . ಇಬ್ಬರೂ ಶಾಲಾ ಕಾಲೇಜುಗಳಲ್ಲಿ ಆಟಗಳನ್ನು ಆಡುತ್ತಾರೆ . ಅವರಿಬ್ಬರು ಕ್ರಿಕೇಟ್ ಮತ್ತು ಹಾಕಿ ಆಟ ಆಡುತ್ತಾರೆ ಎಂದರೆ ಸರಿಯಲ್ಲ . ಕ್ರಿಕೇಟ್ ಹಾಕಿ ಬ್ಯಾಟುಗಳನ್ನು ನಮ್ಮ ಮಕ್ಕಳು ಆಟವಾಡುವ ಅಥವ ವಸ್ತುಗಳಿರುವ ಪೊಲಿಸರಿಗೆ ನಾವೇ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ . ಮಚ್ಚು ಮತ್ತು ರಾಡ್ ಗಳನ್ನು ನನ್ನ ಗಂಡ ಈ ಪ್ರಕರಣಗೊಸ್ಕರ ಸೃಷ್ಟಿ ಮಾಡಿದ್ದಾನೆ ಎಂದರೆ ಸರಿಯಲ್ಲ . ಪೊಲೀಸರು ಹೇಳಿದಂತೆ ನಿಪಿ-3 ರಂತೆ ಮ್ಯಾಜಿಸ್ಟ್ರೇಟ್ ಮುಂದೆ ಸುಳ್ಳು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .)

ಓ . ಹೇ. ಕೆ . ಸರಿ ಇದೆ .

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ .